ತೆರೆದ ಅಂಚೆ

# ನೀನಾಸಮ್ ಸಂಸ್ಕೃತಿ ಶಿಬಿರ

ಅಕ್ಟೋಬರ್ ೨೦೧೨

---

ಆಹ್ವಾನ

**ಶ್ರೀ/ಶ್ರೀಮತಿ**

**ಅವರಿಗೆ**

**ನೀನಾಸಮ್, ಹೆಗ್ಗೋಡು, ಸಾಗರ, ಕರ್ನಾಟಕ ೫೭೭ ೪೧೭**

Ninasam, Heggodu, Sagara
Karnataka 577 417

not to be printed

2nd Cover

# ನೀನಾಸಮ್ ಸಂಸ್ಕೃತಿ ಶಿಬಿರ
# ಅಕ್ಟೋಬರ್ ೨೦೧೨

ಕಳೆದ ಎರಡು ದಶಕಗಳಿಗೂ ಮಿಕ್ಕು ನೀನಾಸವ್ ಸಂಸ್ಥೆಯು ಪ್ರತಿವರ್ಷವೂ ಸಂಸ್ಕೃತಿ ಶಿಬಿರಗಳನ್ನು ನಡೆಸುತ್ತ ಬಂದಿದ್ದು ಅದರ ೨೦೧೨ರ ಅವತರಣಿಕೆ ಇದು. ಡಾ. ಯು.ಆರ್. ಅನಂತಮೂರ್ತಿ ಅವರು ನಿರ್ದೇಶಕರಾಗಿರುವ ಈ ಬಾರಿಯ ಶಿಬಿರವು 'ಸೀಮೋಲ್ಲಂಘನೆ' ಎಂಬ ವಿಷಯವನ್ನು ಕೇಂದ್ರೀಕರಿಸುತ್ತದೆ. ದೇಶದೇಶಗಳ ನಡುವೆ, ಭಾಷೆಭಾಷೆಗಳ ನಡುವೆ, ಜಾತಿಲಿಂಗಗಳ ನಡುವೆ, ಕಲಾಮಾಧ್ಯಮಗಳ ನಡುವೆ ಮತ್ತು ಪರಿಕಲ್ಪನಾತ್ಮಕ ಆವರಣಗಳ ನಡುವೆ ಕಲ್ಪಿತವಾಗಿರುವ ಬಗೆಬಗೆಯ ಸೀಮೆಗಳನ್ನು ಉಲ್ಲಂಘಿಸಿ ನಡೆಯುವ ಪ್ರಯೋಗಗಳು ಮತ್ತು ಚಿಂತನೆಗಳು – ಇವುಗಳನ್ನು ಅವಲೋಕಿಸುವುದು ಮತ್ತು ಪರಿಶೀಲಿಸುವುದು ಈ ಶಿಬಿರದ ಸ್ಥೂಲವಾದ ಕಾರ್ಯಸೂಚಿಯಾಗಿದೆ.

ಈ ವಿಷಯಕ್ಕೆ ಸಂಬಂಧಿಸಿ, ಹಲವು ಉಪನ್ಯಾಸ-ಚರ್ಚೆಗಳು ಮತ್ತು ಪರಿಚಯಾತ್ಮಕ ಭಾಷಣಗಳು ಈ ಶಿಬಿರದುದ್ದಕ್ಕೂ ನಡೆಯಲಿದ್ದು, ಡಾ. ಯು.ಆರ್. ಅನಂತಮೂರ್ತಿ, ಡಾ. ಚಂದ್ರಶೇಖರ ಕಂಬಾರ, ಡಾ. ಸಿದ್ದಲಿಂಗಯ್ಯ, ಶ್ರೀ ಮನು ಚಕ್ರವರ್ತಿ, ಶ್ರೀ ಗಿರೀಶ ಕಾಸರವಳ್ಳಿ, ಶ್ರೀ ಸಮೀಕ್ ಬ್ಯಾನರ್ಜಿ, ಶ್ರೀ ಶಿವ ವಿಶ್ವನಾಥನ್, ಶ್ರೀ ಎಚ್.ಎಸ್. ವೆಂಕಟೇಶಮೂರ್ತಿ, ಶ್ರೀ ಜಿ. ರಾಜಶೇಖರ, ಶ್ರೀ ವಿವೇಕ ಶಾನಭಾಗ, ಶ್ರೀ ವಿದ್ಯಾರ್ಥಿ ಚಟರ್ಜಿ, ಶ್ರೀ ಜಯಂತ ಕಾಯ್ಕಿಣಿ, ಶ್ರೀ ಗೋಪಾಲಕೃಷ್ಣ ಪೈ, ಶ್ರೀ ಅತುಲ್ ತಿವಾರಿ, ಶ್ರೀ ಸುಂದರ ಸಾರುಕ್ಕೈ, ಶ್ರೀ ಸದಾನಂದ ಮೆನೊನ್, ಶ್ರೀಮತಿ ಎಂ.ಎಸ್. ಆಶಾದೇವಿ, ಶ್ರೀಮತಿ ವೈದೇಹಿ, ಶ್ರೀ ಪ್ರಕಾಶ ಬೆಳವಾಡಿ, ಶ್ರೀ ಎಸ್. ದಿವಾಕರ್, ಶ್ರೀ ಪಿ. ಮಹಮದ್ ಮೊದಲಾದ ಹಲವು ಗಣ್ಯರು ಈ ಗೋಷ್ಠಿಗಳಲ್ಲಿ ಭಾಗವಹಿಸಲಿದ್ದಾರೆ.

ಅಲ್ಲದೆ, ಹಗಲಿನ ಕಾರ್ಯಕ್ರಮಗಳ ಭಾಗವಾಗಿ ಕಾವ್ಯ-ನಾಟಕ-ಚಲನಚಿತ್ರದ ಕೆಲವು ಪ್ರಾತ್ಯಕ್ಷಿಕೆ-ಪ್ರದರ್ಶನಗಳು ಕೂಡಾ ನಡೆಯಲಿವೆ. ಬಾಂಬೆ ಜಯಶ್ರೀ ಅವರ ಸಂಗೀತ ಪ್ರಾತ್ಯಕ್ಷಿಕೆ, ಮಂಟೋ ನಾಟಕ ಪ್ರಸ್ತುತಿ, 'ಗಿರಿಬಾಲೆ, 'ಬಾಬುಗಿರಿ, 'ಬದುಕು ಬಯಲು' – ಮೊದಲಾದವು ಈ ಬಗೆಯ ಕಾರ್ಯಕ್ರಮಗಳು. ಜತೆಗೆ, ಶ್ರೀ ಕೆ.ಎಸ್. ರಾಜಾರಾಮ್, ಶ್ರೀ ಎ.ಎನ್. ಮುಕುಂದ್, ಶ್ರೀ ಚನ್ನಕೇಶವ, ಶ್ರೀ ಅಮರೀಶ, ಶ್ರೀ ಚರಣ ಮೊದಲಾದವರು ಈ ಬಾರಿ ಛಾಯಾಗ್ರಹಣ ಮತ್ತು ರಂಗಕಲೆ ಕುರಿತು ಮುಂಜಾವಿನ ವಿಶೇಷ ತರಗತಿಗಳನ್ನು ನಡೆಸಲಿದ್ದಾರೆ.

ಜತೆಗೆ, ಚಿತ್ರಗ್ರಾಹಕ ಶ್ರೀ ಎ.ಎನ್. ಮುಕುಂದ್ ಅವರ ನೇತೃತ್ವದಲ್ಲಿ ಶ್ರೀ ಕೆ.ಎಸ್. ರಾಜಾರಾಮ್, ಶ್ರೀ ಆದಿತ್ಯ ಬೀಳೂರು, ಶ್ರೀ ಪ್ರತೀಕ್ ಮುಕುಂದ್ ಮೊದಲಾದವರ ಫೋಟೋ ಪ್ರದರ್ಶನವೂ ಕೂಡಾ ಪ್ರತಿದಿನವೂ ಸಂಜೆಯ ಹೊತ್ತು ನಡೆಯಲಿದೆ. ಇವುಗಳಲ್ಲದೆ, ಸಂಜೆಯ ಸಾಂಸ್ಕೃತಿಕ ಉತ್ಸವದ ವಿವರಗಳು ಮುಂದಿನ ಪುಟಗಳಲ್ಲಿವೆ.

ನೀನಾಸಮ್, ಹೆಗ್ಗೋಡು, ಸಾಗರ, ಕರ್ನಾಟಕ ೫೭೭ ೪೧೭

not to be printed

3rd Cover

# NINASAM CULTURE COURSE 2012

The Culture Course has been one of Ninasam's major annual events for the last two decades. Held over 7 days every October, The Course is designed around a specific theme, and organised as a combination of special lectures on the theme, lecture-demonstration-discussions on appreciation of art forms during the day-sessions, and a series of cultural programmes in the evenings. The evening festival this year consists of the following programmes:

- **7th October, Sunday:** Ninasam Tirugata Performance - ***Vigadavikramaraya;*** play by Samsa, Directed by Manju Kodagu
- **8th October, Monday:** Ninasam Tirugata Performance - ***Mukkam Post Bombilwadi;*** translation of the Marathi play by Paresh Mokasi, Directed by Omkar K.R.
- **9th October, Tuesday:** Ninasam Play - ***Uttararamacharite;*** Kannada translation of Bhavabhuti's sanskrit play; Directed by B.R. Venkataramana Aithala.
- **10th October, Wednesday:** Karnatak Music Recital by **Bombay Jayashree**
- **11th October, Thursday:** Traditional theatre performance **Srikrishnaparijata,** by Mallikarjuna Mudakavi Dadanatti
- **12th October, Friday: Kannada Poetry in Contemporary Music**, by Humdrum; and play **Vanity Bag**, by Sanchari Theatre, Bangalore, Dir. by N. Mangala
- **13th October, Saturday:** Odissi dance performance by ***Madhulita Mohapatra,*** and her group Nrityantara, Bangalore

Ninasam, Heggodu, Sagara
Karnataka 577 417

not to be
printed
↓
Page 1

**ಅಕ್ಟೋಬರ್ ೭ ಭಾನುವಾರ**

photo to be printed here
see cd for the photo with this file no.
↓
# 07CC12

ತಿರುಗಾಟ ನಾಟಕ

## ವಿಗಡವಿಕ್ರಮರಾಯ

ಸಂಸರ ಕನ್ನಡ ನಾಟಕ ಆಧರಿಸಿದ ಪ್ರಯೋಗ

**ನಿರ್ದೇಶನ: ಮಂಜು ಕೊಡಗು**

ಕನ್ನಡದ ಪ್ರಮುಖ ನಾಟಕಕಾರ ಸಂಸರು ಮೈಸೂರಿನ ಇತಿಹಾಸ ಕುರಿತು ಬರೆದ ನಾಟಕಗಳಲ್ಲಿ ಮುಖ್ಯವಾದ್ದು – 'ವಿಗಡವಿಕ್ರಮರಾಯ'. ಉಳಿದೆಲ್ಲ ಸಂಸ ನಾಟಕಗಳಂತೆಯೇ ಈ ಕೃತಿಯಲ್ಲೂ ಮಹಿಶೂರ ರಾಜ್ಯವು ಒಳ-ಹೊರಗಿನ ವಿರೋಧ ಮತ್ತು ರಾಜಕಾರಣಗಳಿಗೆಲ್ಲ ಎದುರಾಗಿ ನಿಂತು, ಗೆಲ್ಲುವ ಕಥನವು ಪ್ರಧಾನ. ನೆಪಮಾತ್ರಕ್ಕೆ ರಾಜನಾಗಿ, ಸದಾ ಆಮೋದ ಪ್ರಮೋದಗಳಲ್ಲೇ ಮುಳುಗಿರುವ ರಾಜ ಒಡೆಯ ಎಚ್ಚೆತ್ತುಕೊಂಡು ರಾಜಕಾರಣದತ್ತ ಗಮನ ಹರಿಸುವುದರೊಂದಿಗೆ ಈ ನಾಟಕ ಆರಂಭ. ಆದರೆ, ಆವರೆಗೂ ಅಧಿಕಾರದ ಹಿಡಿದಿದ್ದ ದಳವಾಯಿ ವಿಕ್ರಮರಾಯನಿಗೆ ಇದು ಪಥ್ಯವಾಗುವುದಿಲ್ಲ. ಆಗ, ವಿಕ್ರಮರಾಯ ರಾಜನನ್ನು ಕುತಂತ್ರದಿಂದ ಕೊಲ್ಲಿಸಿ, ಆ ಸ್ಥಾನಕ್ಕೆ ರಣಧೀರನನ್ನು ಕೂರಿಸಿ ಅವನನ್ನು ಕೈಗೊಂಬೆ ಮಾಡುವ ಹುನ್ನಾರ ನಡೆಸುತ್ತಾನೆ. ಈ ಕುತಂತ್ರವು ಫಲಿಸದೆ, ಅಂತಿಮವಾಗಿ, ರಣಧೀರ ಪ್ರಾಬಲ್ಯ ಪಡೆಯುವುದು, ಜತೆಗೆ, ಅರಮನೆಯ ಊಳಿಗದವರಿಬ್ಬರಿಂದ ವಿಕ್ರಮರಾಯನೂ ಹತನಾಗುವುದು – ಈ ನಾಟಕದ ಕೇಂದ್ರ ಕಥಾನಕ. ಮಹೀಶೂರಿನ ಹಲವು ಶತಮಾನಗಳ ಇತಿಹಾಸವನ್ನು ಕೂಡಿಸಿ ಕಟ್ಟುವ ಸಂಸನಾಟಕಚಕ್ರದಲ್ಲಿ ಲಾಂಛನಪಾತ್ರವಾದ ರಣಧೀರನು ತನ್ನ ಮಂತ್ರಶಕ್ತಿ-ಪ್ರಭುಶಕ್ತಿಯ ದೀಕ್ಷೆ ಪಡೆಯುವುದು ಈ ಕೃತಿಯಲ್ಲಿಯೇ.

ಹಲವೊಮ್ಮೆ ಪ್ರದರ್ಶಿತವಾಗಿ ಪ್ರಸಿದ್ಧವಾಗಿರುವ ಈ ಕೃತಿಯನ್ನು ಈಗ, ತುಂಬ ಬೇರೆಯದೇ ಆದ, ದೇಹ-ಭಾವ-ಚಲನೆಯನ್ನು ಕೇಂದ್ರವಾಗಿಟ್ಟು ಕೊಂಡ, ರಂಗಭಾಷೆಯಲ್ಲಿ ಮರುರೂಪಿಸುವುದು ಈ ಪ್ರಯೋಗದ ಗುರಿ.

**ಸಂಜೆ ೭ ಗಂಟೆಗೆ**

not to be
printed
↓
Page 2

**ಅಕ್ಟೋಬರ್ ೮ ಸೋಮವಾರ**

photo to be printed here
see cd for the photo with this file no.
↓
# 08CC12

ತಿರುಗಾಟ ನಾಟಕ

## ಮುಕ್ಕಾಂ ಪೋಸ್ಟ್ ಬೊಂಬಿಲ್‌ವಾಡಿ

ಪರೇಶ್ ಮೊಕಾಶಿ ಅವರ ಮರಾಠಿ ನಾಟಕದ ಕನ್ನಡಾನುವಾದ

**ಅನುವಾದ ಮತ್ತು ನಿರ್ದೇಶನ: ಓಂಕಾರ್ ಕೆ.ಆರ್.**

ಮರಾಠಿಯ ಸಮಕಾಲೀನ ನಾಟಕಕಾರರಾದ ಪರೇಶ್ ಮೊಕಾಶಿಯವರ ಪ್ರಸಿದ್ಧ ಜನಪ್ರಿಯ ಪ್ರಹಸನ – 'ಮುಕ್ಕಾಂ ಪೋಸ್ಟ್ ಬೊಂಬಿಲ್‌ವಾಡಿ'. ಇಂಗ್ಲೀಷರು ಭಾರತವನ್ನಾಳುತ್ತಿದ್ದ ಸಮಯದಲ್ಲಿ ಕಲ್ಪಿತವಾದ ಒಂದು ಊಹಾಕಥನ ಈ ನಾಟಕದಲ್ಲಿದೆ – ಅಣುಬಾಂಬು ತಯಾರಿಸುವ ಯುದ್ಧತಂತ್ರದ ಒಂದು ಸಭೆಗಾಗಿ ಜಪಾನಿಗೆ ತೆರಳಿದ್ದ ಹಿಟ್ಲರ್ ಜರ್ಮನಿಗೆ ಮರಳುವಾಗ, ಅಕಸ್ಮಾತ್ತಾಗಿ ಅವನ ವಿಮಾನ ಮಹಾರಾಷ್ಟ್ರದ ಒಂದು ಹಳ್ಳಿಯಲ್ಲಿ ಇಳಿಯುತ್ತದೆ; ಅದೇ ಹಳ್ಳಿಯಲ್ಲಿ ಬೊಂಬಿಲ್‌ವಾಡಿ ನಾಟಕ ಮಂಡಳಿ ಎಂಬ ಕಂಪೆನಿ ತನ್ನ ಪ್ರಯೋಗವೊಂದನ್ನು ಸಿದ್ಧಪಡಿಸುತ್ತಿದೆ. ಅದು ಗೊತ್ತಾದ ಬ್ರಿಟಿಷ್ ಪೋಲೀಸರು ಹಿಟ್ಲರನ ಬೆನ್ನು ಹತ್ತುತ್ತಾರೆ. ಇದರಿಂದಾಗಿ ಪೋಲೀಸರು, ನಾಟಕ ಕಂಪೆನಿ ಮತ್ತು ಹಿಟ್ಲರನ ನಡುವೆ ಬೆನ್ನುಹತ್ತುವ-ತಪ್ಪಿಸಿಕೊಳ್ಳುವ ನಾನಾ ಬಗೆಯ ಸ್ವಾರಸ್ಯಕರ ನಾಟಕೀಯ ಸನ್ನಿವೇಶಗಳು ನಡೆಯುತ್ತವೆ. ಅಂತಿಮವಾಗಿ ಹಿಟ್ಲರ್ ಪರಾರಿಯಾದರೂ ಆತನ ಬಳಿ ಇರುವ ಅಣುಬಾಂಬಿನ ರಹಸ್ಯ ಪುಸ್ತಕವೊಂದು ನಾಟಕ ಮಂಡಳಿಯ ಸುಪರ್ದಿಯಲ್ಲೇ ಉಳಿದುಬಿಡುತ್ತದೆ. ಆಮೇಲೆ, ಈ ರಹಸ್ಯ ಪುಸ್ತಕಕ್ಕೆ ವಿನಿಮಯವಾಗಿ ಮಹಾರಾಷ್ಟ್ರದ ಆ ಊರೇ ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆದುಕೊಳ್ಳುತ್ತದೆ – ಇದು ಈ ನಾಟಕದ ಸ್ಥೂಲಕಥೆ.

ನೆರೆನಾಡು ಮಹಾರಾಷ್ಟ್ರದ ಸಮಕಾಲೀನ ನಾಟಕರಚನೆಯ ಕ್ಷೇತ್ರದಲ್ಲಿ ಹೊಸಹೊಸ ಬಗೆಯ ಪ್ರಯೋಗಗಳು ನಡೆಯುತ್ತಿದ್ದು ಅಂಥ ಒಂದು ಕೃತಿಯನ್ನು ಕನ್ನಡದ ರಂಗಕ್ಕೂ ತರುವುದು ಈ ಪ್ರಯೋಗದ ಉದ್ದೇಶ.

**ಸಂಜೆ ೭ ಗಂಟೆಗೆ**

not to be printed

Page 3

**ಅಕ್ಟೋಬರ್ ೯ ಮಂಗಳವಾರ**

photo to be printed here
see cd for the photo with this file no.

**09CC12**

ನೀನಾಸಮ್ ನಾಟಕ

## ಉತ್ತರರಾಮಚರಿತೆ

ಭವಭೂತಿಯ ಅನುವಾದ: ಬನ್ನಂಜೆ ಗೋವಿಂದಾಚಾರ್ಯ

**ನಿರ್ದೇಶನ:ಬಿ.ಆರ್. ವೆಂಕಟರಮಣ ಐತಾಳ**

ಸಂಸ್ಕೃತ ನಾಟಕಕಾರರಲ್ಲಿ ಪ್ರಸಿದ್ಧನಾದ ಭವಭೂತಿಯ (ಕ್ರಿ.ಶ. ೮ನೆಯ ಶತಮಾನ) 'ಪರಿಣತಪ್ರಜ್ಞೆ'ಯ ನಾಟಕ ಇದು. ರಾಮಾಯಣ ಕಥನದ ನೆಲೆಯಲ್ಲಿ ಭವಭೂತಿಯು ವಾಲ್ಮಿಕಿಯನ್ನು ಅನುಸರಿಸಿದರೂ ಆತ ಸನ್ನಿವೇಶ-ಸಂರಚನೆಗಳಲ್ಲಿ ಹೊಸಬಗೆಯ ಆವಿಷ್ಕಾರ ಮಾಡಿದ್ದಾನೆ. ಮೊದಲ ಅಂಕದಲ್ಲಿ ಬರುವ ರಾಮಾಯಣದ ಪೂರ್ವಕತೆಯ ಆಯ್ದ ಸನ್ನಿವೇಶಗಳನ್ನು ಚಿತ್ರದರ್ಶನದ ಮೂಲಕ ತೋರಿಸುವ ಕ್ರಮ, ಅಥವಾ ಶಂಭೂಕನ ಕೊಲೆಯ ಪ್ರಸಂಗವು ಎರಡನೆಯ ಅಂಕದಲ್ಲಿ ಬೇರೆಯೇ ಅರ್ಥದ ಹೊಳಪಿನಲ್ಲಿ ಕಾಣಿಸಿಕೊಂಡು ರಾಮನನ್ನು ಆತ್ಮವಿಮರ್ಶೆಗೆ ಒಡ್ಡುವ ರೀತಿ – ಇದಕ್ಕೆ ಉದಾಹರಣೆ. ಮೂರನೆಯ ಛಾಯಾಂಕವು ರಾಮಸೀತೆಯರನ್ನು ಬಿಂಬಪ್ರತಿಬಿಂಬಗಳ ಮುಖಾಮುಖಿ ಎಂಬಂತೆ ಎದುರಾಗಿಸುತ್ತದೆ; ಮುಂದಿನ ಅಂಕಗಳಲ್ಲಿ – ಕುಶಲವರು ತಮಗೆ ಕಾವ್ಯದ ಮೂಲಕ ಮಾತ್ರ ಪರಿಚಯವಿರುವ ರಾಮನನ್ನು ರಣಕಣದಲ್ಲಿ ಮುಖತಃ ಭೇಟಿಯಾದರೆ, ಸೀತೆಯನ್ನು ಸ್ವತಃ ಬಲ್ಲ ರಾಮನು ಈಗ ವಾಲ್ಮೀಕಿಯ ನಾಟಕದಲ್ಲಿ ಆಕೆಯನ್ನು ಕಾಣುವ ಸನ್ನಿವೇಶ ಇಲ್ಲಿದೆ. ಇಂಥ ವಿಚಿತ್ರ-ವಿಶಿಷ್ಟ ರಂಗಪ್ರತಿಮೆಗಳ ಮೂಲಕ ಭವಭೂತಿಯು ಕಲೆ ಮತ್ತು ಬದುಕಿನ ನಡುವಿನ ಸಂಬಂಧಗಳನ್ನು ಬೇರೆ ಬಗೆಯಿಂದ ನೋಡುವ ತನ್ನ ದರ್ಶನವನ್ನು ನಮ್ಮೆದುರಿಗೆ ಮಂಡಿಸುತ್ತಾನೆ.

ಹೆಗ್ಗೋಡು ಸುತ್ತಮುತ್ತಲಿನ ನೀನಾಸಮ್ ಬಳಗವು ವರ್ಷಕ್ಕೊಮ್ಮೆ ಕೂಡಿ ತಯಾರಿಸುವ ನಾಟಕಸರಣಿಯಲ್ಲಿ ಬಂದ ೨೦೧೨ರ ಪ್ರಯೋಗ ಇದು.

**ಸಂಜೆ ೭ ಗಂಟೆಗೆ**

not to be printed

Page 4

**ಅಕ್ಟೋಬರ್ ೧೦ ಬುಧವಾರ**

photo to be printed here
see cd for the photo with this file no.

**10CC12**

ಕರ್ನಾಟಕ ಸಂಗೀತ ಗಾಯನ

## ವಿ। ಬಾಂಬೇ ಜಯಶ್ರೀ

ಮತ್ತು ಸಹಕಲಾವಿದರಿಂದ

ಕರ್ನಾಟಕ ಸಂಗೀತದಲ್ಲಿ ಪ್ರಸಿದ್ಧನಾಮರಾದ ಬಾಂಬೇ ಜಯಶ್ರೀ ಅವರು ಕಳೆದ ಮೂರು ದಶಕಗಳಿಂದ ಸಂಗೀತ ಕಛೇರಿಗಳನ್ನು ನೀಡುತ್ತಿರುವವರು. ಖ್ಯಾತ ವಯೋಲಿನ್ ವಾದಕ ಲಾಲ್‌ಗುಡಿ ಜಯರಾಮನ್ ಮತ್ತು ಶ್ರೀಮತಿ ಟಿ.ಆರ್. ಬಾಲಮಣಿ ಅವರ ಶಿಷ್ಯರಾಗಿ ಬೆಳೆದ ಜಯಶ್ರೀ, ಮುಂದೆ ತಮ್ಮದೇ ವಿಶಿಷ್ಟ ಛಾಪಿನ ಗಾಯನಪ್ರಸ್ತುತಿಯನ್ನು ಬೆಳೆಸಿಕೊಂಡರು. ಶಾಸ್ತ್ರೀಯ ಗಾಯಕರಾಗಿ ದೇಶವಿದೇಶದ ಸುಪ್ರಸಿದ್ಧ ಉತ್ಸವಗಳಲ್ಲೆಲ್ಲ ಇವರು ಪಾಲ್ಗೊಂಡಿದ್ದಾರೆ; ಡರ್ಬಾನಿನ ರಾಯಲ್ ಅಪೆರಾ ಹೌಸ್‌ನಲ್ಲಿ ಮೊತ್ತಮೊದಲ ಕರ್ನಾಟಕ ಸಂಗೀತ ಹಾಡಿದ ಖ್ಯಾತಿ ಇವರದ್ದು. ಸಂಗೀತ ಕಲಾನಿಧಿ, ನಾದಭೂಷಣಮ್ ಮೊದಲಾದ ಪ್ರಶಸ್ತಿಗಳು ಇವರಿಗೆ ಸಿಕ್ಕಿವೆ.

ಜಯಶ್ರೀ ಅವರ ಇನ್ನೊಂದು ವೈಶಿಷ್ಟ್ಯವೆಂದರೆ ಅವರು ಕರ್ನಾಟಕಿ ಅಲ್ಲದೆ ಅನ್ಯ ಶಾಸ್ತ್ರೀಯ ಮತ್ತು ಜನಪ್ರಿಯ ಸಂಗೀತಗಳ ಜತೆಗೂ ಮುಖಾಮುಖಿ ನಡೆಸಿರುವುದು. ಸುಪ್ರಸಿದ್ಧ ಹಿಂದುಸ್ತಾನಿ ಗಾಯಕರೊಂದಿಗೆ ಇವರು ಜುಗಲ್‌ಬಂದಿ ನಡೆಸಿದ್ದಾರೆ; ಪಾಶ್ಚಾತ್ಯ ಸಂಗೀತಗಾರರೊಂದಿಗೆ ಕೂಡಿ ಹೊಸ ಬಗೆಯ ಸಂಗೀತ ಕಟ್ಟಿದ್ದಾರೆ. 'ಲಿಸನಿಂಗ್ ಟು ಲೈಫ್' ಎಂಬ ಹೆಸರಿನ ಬೇರೆಬೇರೆ ಸಂಗೀತ ಪ್ರಕಾರಗಳಲ್ಲಿ ರಾಗಗಳ ಸೀಮೋಲ್ಲಂಘನ ಕುರಿತ ಹೊಸ ಪ್ರಯೋಗವೊಂದನ್ನು ಅವರು ಈಚೆಗೆ ಪ್ರಸ್ತುತಗೊಳಿಸಿದ್ದಾರೆ.

ಪ್ರಸ್ತುತ ಕಾರ್ಯಕ್ರಮದಲ್ಲಿ ಜಯಶ್ರೀ ಅವರ ಶಿಷ್ಯೆಯರೊಂದಿಗೆ ಸಹಕಲಾವಿದರು – ಶ್ರೀ ಎಂಬರ್ ಕಣ್ಣನ್ (ವಯೋಲಿನ್), ಶ್ರೀ ಸುಮೇಶ್ ನಾರಾಯಣ್ (ಮೃದಂಗಮ್) ಮತ್ತು ಶ್ರೀ ನೇರ್ಕುಣಂ ಶಂಕರ್ (ಖಂಜೀರಾ).

**ಸಂಜೆ ೭ ಗಂಟೆಗೆ**

not to be
printed
↓
Page 5

## ಅಕ್ಟೋಬರ್ ೧೧ ಗುರುವಾರ

photo to be printed here
see cd for the photo with this file no.
↓
**11CC12**

ಸಾಂಪ್ರದಾಯಿಕ ರಂಗಪ್ರದರ್ಶನ

# ಶ್ರೀಕೃಷ್ಣಪಾರಿಜಾತ

ಮಲ್ಲಿಕಾರ್ಜುನ ಮುದಕವಿ ದಾದನಟ್ಟಿ ತಂಡದವರಿಂದ

ಅಪರಾಳ ತಮ್ಮಣ್ಣನಿಂದ ರಚಿತವಾಗಿ ಕುಲಗೋಡು ತಮ್ಮಣ್ಣನಿಂದ ರಂಗಕ್ಕೆ ಬಂದ ಪಾರಿಜಾತ ಪ್ರಕಾರಕ್ಕೆ ನೂರೈವತ್ತು ವರ್ಷಗಳ ಪರಂಪರೆಯಿದೆ. ಕನ್ನಡ-ಮರಾಠಿ, ಮಾರ್ಗ-ದೇಸಿ ಮೊದಲಾದ ಹಲವು ಸೀಮೆಗಳನ್ನು ಉಲ್ಲಂಘಿಸುತ್ತ ಸಾಗುವ ಈ ಪ್ರಕಾರದ ಕಥೆಯಲ್ಲಿ ಗೊಲ್ಲತಿ-ಕೊರವಂಜಿಯರು ಬರುವಂತೆ ಕೃಷ್ಣ-ರುಕ್ಮಿಣಿ-ಸತ್ಯಭಾಮೆಯರೂ ಬರುತ್ತಾರೆ; ಶಾಸ್ತ್ರೀಯ-ನಾಟ್ಯ-ಜಾನಪದ ಸಂಗೀತಗಳ ಸಮ್ಮೇಳ ಈ ಪ್ರಕಾರದಲ್ಲಿದೆ. ನಾರದನು ಸುರಲೋಕದಿಂದ ತಂದಿತ್ತ ಹೂವನ್ನು ಕೃಷ್ಣ ರುಕ್ಮಿಣಿಗೆ ಕೊಟ್ಟಿದ್ದು ಗೊತ್ತಾಗಿ ಅದರಿಂದ ರುಕ್ಮಿಣಿ ಸತ್ಯಭಾಮೆಯರಲ್ಲಿ ಮತ್ಸರ ಮೂಡುವ ಜನಜನಿತ ಐತಿಹ್ಯವು ಈ ಪ್ರಕಾರದ ಕಥನಕೇಂದ್ರ. ಕಥೆಯನ್ನು ನಡೆಸುವ ದೂತಿಯಿಂದ ಈ ಪೌರಾಣಿಕ ಕಥನವು ತುಂಬ ಸ್ವಾರಸ್ಯಕರವಾಗಿ ಎಲ್ಲ ಕಾಲಗಳನ್ನೂ ಒಳಗೊಳ್ಳುವುದು ಈ ರಂಗಪ್ರಕಾರದ ಒಂದು ಅನನ್ಯ ಲಕ್ಷಣ.

ಮುಧೋಳ ತಾಲ್ಲೂಕು ದಾದನಟ್ಟಿಯ ಪಾಂಡುರಂಗ ಪಾರಿಜಾತ ಕಂಪೆನಿ ಈ ಪ್ರಯೋಗವನ್ನು ಕಳೆದ ನಾಲ್ಕು ದಶಕಗಳಿಂದ ಉತ್ತರ ಕರ್ನಾಟಕದಲ್ಲಿ ಮನೆಮಾತಾಗಿಸಿದೆ; ದೇಶದ ನಾನಾ ಉತ್ಸವಗಳಲ್ಲಿ ಕೂಡ ಪ್ರದರ್ಶಿಸಿದೆ. ತಂಡದ ನೇತಾರ ಶ್ರೀ ಮಲ್ಲಿಕಾರ್ಜುನ ಮುದಕವಿಯವರು ಯಕ್ಷಗಾನ ಬಯಲಾಟ ಅಕಾಡೆಮಿಯ ಗೌರವಪ್ರಶಸ್ತಿ ಕೂಡ ಪಡೆದಿದ್ದಾರೆ. ಅವರಲ್ಲದೆ ಶ್ರೀಮತಿ ಶಾಂತವ್ವಾ ಹಲಗತ್ತಿ, ಶ್ರೀಮತಿ ಶಾರದಾ ಜಂಬಗಿ, ಶ್ರೀಮತಿ ಸತ್ಯವ್ವ ಅರಳಿಕಟ್ಟಿ, ಶ್ರೀ ಭೀಮಶಿ ಕಂಭರ, ಶ್ರೀ ಈರಣ್ಣ ಬಡಿಗೇರ, ಶ್ರೀ ಕಮಾಲಸಾಬ್ ಡೂಗಿ, ಶ್ರೀ ವಿಠ್ಠಲ ಕಂಬಾರಿ, ಶ್ರೀ ಹನುಮಂತ ಪೂಜೇರಿ ಅವರು ಈ ತಂಡದಲ್ಲಿದ್ದಾರೆ.

**ಸಂಜೆ ೭ ಗಂಟೆಗೆ**

not to be
printed
↓
Page 6

## ಅಕ್ಟೋಬರ್ ೧೨ ಶುಕ್ರವಾರ

photo to be printed here
see cd for the photo with this file no.
↓
**12CC12a**

ಕಾವ್ಯ-ಗೀತ-ಪ್ರಯೋಗ

# ಹಮ್‌ಡ್ರಮ್

ತಂಡದ ಕಲಾವಿದರಿಂದ

ನಾನಾ ದೇಶಗಳಿಂದ, ಸಂಗೀತ ಸಂಪ್ರದಾಯದ ಹಿನ್ನೆಲೆಗಳಿಂದ ಬಂದ ಕೆಲವು ಸಂಗೀತಗಾರರು ಒಟ್ಟುಗೂಡಿ ಜಾಗತಿಕ ಸಂಗೀತವೇದಿಕೆಯೊಂದನ್ನು ಕಟ್ಟುವ ಉದ್ದೇಶದಿಂದ ರೂಪುದೊಂಡದ್ದು – ಹಮ್‌ಡ್ರಮ್ ತಂಡ. ಈ ತಂಡದ ಪ್ರಮುಖ ಹಾಡುಗಾರ್ತಿ – ಬೆಂಗಳೂರಿನ ಎಂ.ಡಿ. ಪಲ್ಲವಿ; ಹಿಂದುಸ್ತಾನಿ ಹಿನ್ನೆಲೆಯಿಂದ ಬಂದ ಅವರು ಭಾವಗೀತೆಗಳ ಗಾಯಕರಾಗಿ ಕನ್ನಡಿಗರಿಗೆ ಪರಿಚಿತರು. ತಂಡದ ಇನ್ನೊಬ್ಬ ಸದಸ್ಯ ಸುಮಿತ್ ರಾಮಚಂದ್ರನ್ ಕೊಲ್ಕತ್ತಾದವರು; ಪಾಶ್ಚಿಮಾತ್ಯ ರಾಕ್ ಮತ್ತು ಜಾಜ್ ಸಂಗೀತದ ಹಿನ್ನೆಲೆಯಿಂದ ಬಂದಿರುವ ಅವರು ಈ ತಂಡದ ಪ್ರಧಾನ ಗಿಟಾರಿಸ್ಟ್. ಹಾಗೆಯೇ, ಕೀತ್ ಪೀಟರ್ಸ್ ಚೆನ್ನೈಮೂಲದ ಪ್ರಸಿದ್ಧ ಬಾಸ್ ಗಿಟಾರ್ ವಾದಕರು; ಜಾಜ್ ಪ್ರಕಾರದಲ್ಲಿ ಪರಿಣತರು. ಮತ್ತೊಬ್ಬ ವಾದಕ ಮತ್ತು ಸೌಂಡ್ ಎಂಜಿನಿಯರ್ ಪ್ರಮಥ್ ಕಿರಣ್ ಅವರು ಕರ್ನಾಟಕ ಸಂಗೀತ ಹಾಗೂ ಲ್ಯಾಟಿನ್ ವಾದ್ಯವಾದನದಲ್ಲಿ ನಿರತರು. ಜತೆಗೆ, ಬೆಂಗಳೂರಿನಲ್ಲಿ ತಾಳವಾದ್ಯ ಮತ್ತು ಡ್ರಮ್‌ವಾದಕರಾಗಿ ಪ್ರಸಿದ್ಧರಾದ ಅರುಣ್ ಕುಮಾರ್ ಈ ತಂಡ ಇನ್ನೊಬ್ಬ ಸದಸ್ಯರು; ಕರ್ನಾಟಕ ಸಂಗೀತದ ಬೇರುಗಳುಳ್ಳವರು.

ತಮ್ಮ ಮೊದಲ ಪ್ರಯೋಗವಾಗಿ ಈ ತಂಡವು ಆಧುನಿಕ ಪೂರ್ವ ಮತ್ತು ಹೊಸನ್ನಡದ ಕೆಲವು ಕಾವ್ಯಭಾಗಗಳನ್ನು ಎತ್ತಿ ಅದನ್ನು ಈಗಾಗಲೇ ಪರಿಚಿತವಾಗಿರುವುದಕ್ಕಿಂತ ಭಿನ್ನ ರೂಪದಲ್ಲಿ ಕಟ್ಟಹೊರಟಿದೆ; ಆ ಮೂಲಕ ಆ ಕಾವ್ಯದೊಳಗೆ ಹೊಸ ಅರ್ಥದ ಆವಾಹನೆ ಸಾಧ್ಯವೆ ಎಂಬ ಆವಿಷ್ಕಾರದಲ್ಲಿ ತೊಡಗಿದೆ. ಅಂಥ ಕೆಲವು ಆಯ್ದ ಪ್ರಯೋಗಗಳೇ ಪ್ರಸ್ತುತ ಕಾರ್ಯಕ್ರಮ.

**ಸಂಜೆ ೭ ಗಂಟೆಗೆ (ಪ್ರಥಮಾರ್ಧ)**

not to be printed
Page 7

**ಅಕ್ಟೋಬರ್ ೧೨ ಶುಕ್ರವಾರ**

photo to be printed here
see cd for the photo with this file no.

# 12CC12b

ವೈದೇಹಿ ಕವಿತೆಗಳನ್ನಾಧರಿಸಿದ ರಂಗಪ್ರಯೋಗ

## ವ್ಯಾನಿಟಿ ಬ್ಯಾಗ್

ಬೆಂಗಳೂರಿನ ಸಂಚಾರಿ ಥಿಯೇಟರ್ ತಂಡದ ಕಲಾವಿದರಿಂದ

**ನಿರ್ದೇಶನ: ಎನ್. ಮಂಗಳಾ**

೨೦೦೪ರಲ್ಲಿ ಹೊಸ ರಂಗಕನಸುಗಳಿಗೆ ರೂಪ ಕೊಡುವ ಉದ್ದೇಶ ಇಟ್ಟುಕೊಂಡು ಬೆಂಗಳೂರಿನಲ್ಲಿ ಅಸ್ತಿತ್ವಕ್ಕೆ ಬಂದ ತಂಡ ಸಂಚಾರಿ ಥಿಯೇಟರ್. 'ಊರ್ಮಿಳಾ', 'ಅರಹಂತ' ಮೊದಲಾದ ನಾಟಕಗಳನ್ನು ತಯಾರಿಸಿ, ಅದನ್ನು ಹತ್ತಾರು ಕಡೆ ಪ್ರದರ್ಶಿಸಿರುವ ಈ ತಂಡವು ಕಳೆದ ವರ್ಷ ಮಹಿಳಾದಿನದ ಸಂದರ್ಭದಲ್ಲಿ ರಂಗದ ಮೇಲೆ ತಂದ ಪ್ರಯೋಗ ಇದು.

ಕನ್ನಡದ ಪ್ರಸಿದ್ಧ ಲೇಖಕಿ ವೈದೇಹಿ ಅವರ ಕಾವ್ಯವನ್ನು ಆಧಾರವಾಗಿ ಇಟ್ಟುಕೊಂಡು ಕಟ್ಟಲಾಗಿರುವ 'ವ್ಯಾನಿಟಿ ಬ್ಯಾಗ್' ಕೃತಿಯು ವೈದೇಹಿಯ ಕಾವ್ಯಲೋಕದ ವಿವಿಧ ನೆಲೆಗಳನ್ನು ಅನಾವರಣಗೊಳಿಸುತ್ತಾ ಆ ಮೂಲಕ ಹೆಣ್ಣಿನ ಚಿತ್ತ-ಚಿತ್ತಾರದ ಅನೂಹ್ಯ ಸಂಗತಿಗಳನ್ನೂ, ಹೆಣ್ಣಿಗೆ ಮಾತ್ರ ಅನುಭವಗಮ್ಯವಾಗುವ ಹಲವು ಅಮೂರ್ತ ಪ್ರಸಂಗಗಳನ್ನೂ, ಅವಳ ಭಾವ ಪ್ರಪಂಚದ ಹಲವು ಸೂಕ್ಷ್ಮ ನೇಯ್ಗೆಗಳನ್ನೂ ದೃಶ್ಯ ರೂಪಕದಲ್ಲಿ ಕಾಣಿಸುತ್ತದೆ. 'ನೋಡಬಾರದು ಚೀಲದೊಳಗನು' -- ಎನ್ನುವ ವೈದೇಹಿಯವರ ಮಾತನ್ನೇ ವಿಸ್ತರಿಸುತ್ತಾ, 'ನೋಡಲಾಗದ' ಆ ಬ್ಯಾಗಿನ ವ್ಯಾನಿಟಿಯ ಒಳಗಿರುವ ವಸ್ತುಪ್ರಪಂಚವನ್ನು ವೈದೇಹಿ ಕಾವ್ಯಲೋಕದ ಹಲವು ಪ್ರಸಂಗಗಳ ಮೂಲಕ ಪ್ರಸ್ತುತಪಡಿಸಲಾಗುತ್ತದೆ. ವ್ಯಾನಿಟಿ ಬ್ಯಾಗ್‌ನ ರೂಪಕದಲ್ಲಿ ಹೆಣ್ಣಿನ ಅಂತರಂಗಕ್ಕೆ ಸರ್ಚ್ ಲೈಟ್ ಬೀರಿ, ಸ್ತ್ರೀವಿಶ್ವರೂಪ ದರ್ಶನ ಮಾಡಿಸುವ ವೈದೇಹಿಯವರ ಪ್ರಯತ್ನವನ್ನು ದೃಶ್ಯರೂಪದಲ್ಲಿ ಕಟ್ಟಿಕೊಡುವ ಮಹದಾಶೆಯ ಹಂಬಲವು ಪ್ರಸ್ತುತ ಪ್ರಯೋಗದ ಹಿಂದಿದೆ.

**ಸಂಜೆ ೮.೩೦ ಗಂಟೆಗೆ (ದ್ವಿತೀಯಾರ್ಧ)**

not to be printed
Page 8

**ಅಕ್ಟೋಬರ್ ೧೩ ಶನಿವಾರ**

photo to be printed here
see cd for the photo with this file no.

# 13CC12

ಶಾಸ್ತ್ರೀಯ ಓಡಿಸ್ಸಿ ನೃತ್ಯ

## ವಿ। ಮಧುಲಿತಾ ಮೊಹಾಪಾತ್ರ

ಮತ್ತು ಬೆಂಗಳೂರಿನ ನೃತ್ಯಾಂತರ ತಂಡದ ಕಲಾವಿದರಿಂದ

ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿ, ನೃತ್ಯಾಂತರ ಅಕಾಡೆಮಿ ಆಫ್ ಪರ್ಫಾರ್ಮಿಂಗ್ ಆರ್ಟ್ಸ್ ಎಂಬ ನೃತ್ಯ ತರಬೇತಿ ಸಂಸ್ಥೆಯನ್ನು ನಡೆಸುತ್ತಿರುವ ಮಧುಲಿತಾ ಮೊಹಾಪಾತ್ರ ಅವರು ಮೂಲತಃ ಓರಿಸ್ಸಾದವರು; ಬಾಲ್ಯದಿಂದಲೇ ಬೇರೆಬೇರೆ ಗುರುಗಳಿಂದ ಓರಿಸ್ಸಾದ ಜಾನಪದ ಮತ್ತು ಶಾಸ್ತ್ರೀಯ ನೃತ್ಯಗಳನ್ನು ಕಲಿತು ಅದನ್ನು ಬೆಳೆಸಿಕೊಳ್ಳುತ್ತ ಬಂದವರು.

ಗುರು ಕೃಷ್ಣಚಂದ್ರ ಸಾಹೂ ಅವರಿಂದ ಮಧುಲಿತಾ ಓಡಿಸ್ಸಿ ನೃತ್ಯಪ್ರಕಾರದ ತಮ್ಮ ಮೊದಲ ಪಾಠಗಳನ್ನು ಕಲಿತರು. ಬಳಿಕ, ಭುವನೇಶ್ವರದ ಓರಿಸ್ಸಾ ಡಾನ್ಸ್ ಅಕಾಡೆಮಿಯಲ್ಲಿ ಸೇರಿ ಅಲ್ಲಿ ಗುರು ಗಂಗಾಧರ ಪ್ರಧಾನ್ ಅವರಿಂದ ಈ ಪ್ರಕಾರದ ಪ್ರೌಢ ಮಾರ್ಗದರ್ಶನ ಪಡೆದುಕೊಂಡರು. ಆಮೇಲೆ, ಓರಿಸ್ಸಾ ಸಂಗೀತ ನಾಟಕ ಅಕಾಡೆಮಿಯಡಿ ಗುರು ಪ್ರತಿಭಾ ಕುಮಾರ್ ಪ್ರಧಾನ್ ಅವರಿಂದ ಓಡಿಸ್ಸಿಯ ಆಚಾರ್ಯ ಕೇಳುಚರಣ ಮೊಹಾಪಾತ್ರರ ಶೈಲಿಯ ಅಭ್ಯಾಸ ನಡೆಸಿದರು. ೧೯೯೭ರಿಂದ ರಂಗಪ್ರಯೋಗಗಳನ್ನು ಆರಂಭಿಸಿರುವ ಮಧುಲಿತಾ ದೆಹಲಿ, ಚೆನ್ನೈ, ಬೆಂಗಳೂರು, ಜೈಪುರ ಸೇರಿದಂತೆ ಪ್ರತಿಷ್ಠಿತ ಉತ್ಸವಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ. ಸಂಬಲಪುರಿ ಜಾನಪದ ನೃತ್ಯದ ಪರಿಣತಿ ಕೂಡ ಅವರಿಗಿದೆ.

ಮಧುಲಿತಾ ಅವರೊಂದಿಗೆ ಅವರ ತಂಡದ ಆರು ಜನ ಕಲಾವಿದರು ಪಾಲ್ಗೊಳ್ಳುವ ಈ ಕಾರ್ಯಕ್ರಮದಲ್ಲಿ ಓಡಿಸ್ಸಿ ಸಾಂಪ್ರದಾಯಿಕ ಪ್ರಯೋಗದ ಕ್ರಮವನ್ನು ಅನುಸರಿಸಲಾಗುತ್ತದೆ – ಮಂಗಳಾಚರಣ, ಸ್ಥಾಯಿ, ಪಲ್ಲವಿ, ಅಭಿನಯ, ಮೋಕ್ಷ್ಯಗಳೆಂಬ ಘಟ್ಟಗಳಲ್ಲಿ ನೃತ್ಯಪ್ರಸ್ತುತಿ ನಡೆಯುತ್ತದೆ.

**ಸಂಜೆ ೭ ಗಂಟೆಗೆ**